**ಕರ್ನಾಟಕ ಸರ್ಕಾರ**

**ಸಂಖ್ಯೆ: ಪಪೂಶಿ/ಆವಿಎ/ವಿನಿ3/ಪ್ರಾಬಡ್ತಿ/02/2020-21(ಭಾಗ-2)**

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 012.
ದಿನಾಂಕಃ 04-08-2021.

**ಜ್ಞಾಪ ನ**

**ವಿಷಯ:-** ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗೆ ಸ್ಥಾನಪನ್ನ ಬಡ್ತಿ ಹೊಂದಿರುವ ಉಪನ್ಯಾಸಕರುಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸುವ ಬಗ್ಗೆ.

**ಉಲ್ಲೇಖ:-** ಸರ್ಕಾರದ ಅಧಿಸೂಚನೆ ಸಂಖ್ಯೆಃ ಇಪಿ 16 ಡಿಜಿಡಿ 2021 ದಿಃ 04.08.2021.

– * –

ಉಲ್ಲೇಖಿತ ಸರ್ಕಾರದ ಅಧಿಸೂಚನೆಯಲ್ಲಿ ಉಪನ್ಯಾಸಕ ವೃಂದದಿಂದ ಪ್ರಾಚಾರ್ಯರ ವೃಂದಕ್ಕೆ ಸ್ಥಾನಪನ್ನ ಬಡ್ತಿ ಹೊಂದಿರುವವರಿಗೆ ಜೇಷ್ಠತಾ ಪಟ್ಟಿಯಂತೆ ಪ್ರಾಚಾರ್ಯರ ಹುದ್ದೆಯಲ್ಲಿ ಸ್ಥಳ ನಿಯುಕ್ತಿಗಾಗಿ ಕೌನ್ಸಲಿಂಗ್‌ನ್ನು ***ದಿನಾಂಕಃ 05.08.2021 ರಂದು ಬೆಳಗ್ಗೆ 12:00 ಗಂಟೆಗೆ ವಿಡಿಯೋ ಕಾನ್ಫರೆನ್ಸ್ ZOOM ತಂತ್ರಾಂಶದ ಮೂಲಕ*** ನಡೆಸಲಾಗುವುದು. ಬಡ್ತಿ ಹೊಂದಿರುವ ಉಪನ್ಯಾಸಕರು ಕೌನ್ಸಿಲಿಂಗ್‌ನಲ್ಲಿ ಹಾಜರಾಗಿ ಕಡ್ಡಾಯವಾಗಿ ಸ್ಥಳ ಆಯ್ಕೆಯನ್ನು ಮಾಡಿಕೊಳ್ಳತಕ್ಕದ್ದು. ***ತಪ್ಪಿದಲ್ಲಿ ನಿಮಗೆ ನೀಡಿರುವ ಬಡ್ತಿಯನ್ನು ರದ್ದುಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.*** ಪಟ್ಟಿಯನ್ನು ಇಲಾಖೆಯ ಅಂತರ್ಜಾಲ www.pue.kar.nic.in ದಲ್ಲಿ Bulletin Board Link ನಲ್ಲಿ ಅಳವಡಿಸಲಾಗಿದೆ.

**ಕೌನ್ಸಿಲಿಂಗ್‌ಗೆ ಸಂಬಂಧಿಸಿದ ಸೂಚನೆಗಳುಃ**

1. ಇಲಾಖೆಯಿಂದ ನೀಡಿರುವ ಗುರುತಿನ ಚೀಟಿ/ಪತ್ರ ಅಥವಾ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಾಲೇಜಿನ ಪ್ರಾಚಾರ್ಯರಿಂದ ನಿಮ್ಮ ಇತ್ತೀಚಿನ ಭಾವಚಿತ್ರವನ್ನು ಅಂಟಿಸಿ ದೃಢೀಕರಿಸಿದ ಸೇವಾ ದೃಢೀಕರಣ ಪತ್ರ.
2. **ಖಾಲಿಯಿರುವ ಎ ಬಿ & ಸಿ ವಲಯದಲ್ಲಿನ ವಿದ್ಯಾರ್ಥಿಗಳ ಸಂಖ್ಯೆ 100ಕ್ಕಿಂತ ಹೆಚ್ಚು ಮತ್ತು 750ಕ್ಕಿಂತ ಕಡಿಮೆ ಇರುವ ಪ್ರಾಂಶುಪಾಲರ ಹುದ್ದೆಗಳಿಗೆ ಮಾತ್ರ ಕೌನ್ಸಿಲಿಂಗ್ ನಡೆಸಲಾಗುವುದು.**
3. ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಂಡ ನಂತರ ಯಾವುದೇ ಸ್ಥಳ ಮಾರ್ಪಾಡಿಗೆ ಅವಕಾಶವಿರುವುದಿಲ್ಲ.
4. ಹೈದ್ರಾಬಾದ್-ಕರ್ನಾಟಕ ಪ್ರಾದೇಶಿಕ ರಾಜ್ಯವ್ಯಾಪಿ ಸ್ಥಳೀಯ ವೃಂದದಲ್ಲಿ ಬಡ್ತಿ ಹೊಂದಿರುವ ಉಪನ್ಯಾಸಕರು ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿನ ಪ್ರಾಂಶುಪಾಲರ ಖಾಲಿ ಹುದ್ದೆಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವುದು (ಬಿ.ಬಿ.ಎಂ.ಪಿ ವ್ಯಾಪಿಯಲ್ಲಿನ ಸ್ಥಳೀಯ ವೃಂದದ ಶೇಕಡ 8 ರಷ್ಟು ಖಾಲಿ ಹುದ್ದೆಗಳನ್ನು ಹೊರತುಪಡಿಸಿ).

ಸಹಿ/-
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಇವರಿಗೆ,

ಶ್ರೀ/ಶ್ರೀಮತಿ _ _ _ _ _, ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ________ .

**ಪ್ರತಿಃ**

1. ನಿರ್ದೇಶಕರ ಆಪ್ತಶಾಖೆ, ಜಂಟಿ ನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಆಡಳಿತ) ಇವರಿಗೆ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಕಳುಹಿಸುತ್ತಾ ನಿಮ್ಮ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಬಡ್ತಿ ಹೊಂದಿರುವ ಎಲ್ಲಾ ಉಪನ್ಯಾಸಕರುಗಳಿಗೆ ಕೌನ್ಸೆಲಿಂಗ್‌ಗೆ ಹಾಜರಾಗಲು ಕಡ್ಡಾಯವಾಗಿ ತಿಳಿಸತಕ್ಕದ್ದು.
3. ಸಂಬಂಧಿಸಿದ ಎಲ್ಲಾ ಕಾಲೇಜಿನ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕೆ -ಅಂತರ್ಜಾಲದ ಮೂಲಕ.
4. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು **ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಸಲು ಹಾಗೂ ಕೌನ್ಸಲಿಂಗ್ ಕಾರ್ಯಕ್ಕೆ ಬೇಕಾದ ಕಾರ್ಯ ಸಿದ್ಧತೆ ಮತ್ತು ತಂತ್ರಾಂಶ ವ್ಯವಸ್ಥೆಯನ್ನು ಅಗತ್ಯವಾಗಿ ಸಿದ್ಧಪಡಿಸಿಟ್ಟುಕೊಳ್ಳತಕ್ಕದ್ದು.**
5. ಕಚೇರಿ ಪ್ರತಿ.